ಅವಶ್ಯಕತೆಯಿದೆ, ಅದರ ಬಗ್ಗೆ ಎರಡು ಪ್ರಶ್ನೆಯಿಲ್ಲ. ಆದರೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಹಾಗೂ ಕಾನೂನು ಇಲಾಖೆಯ ಚೌಕಟ್ಟಿನೊಳಗೆ ಏನು ಮಾಡುವುದಕ್ಕೆ ಸಾಧ್ಯವಿದೆ ಎಂಬ ಬಗ್ಗೆ ನಮ್ಮ ಇಲಾಖಾಧಿಕಾರಿಗಳು ಕಳೆದೆರಡು ದಿವಸಗಳಿಂದ ಚರ್ಚೆ ಮಾಡುತ್ತಿದ್ದು ಇದರ ಬಗ್ಗೆ ಚಿಂತನೆ ನಡೆಯುತ್ತಿದೆ.

ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ಆಯುರ್ವೇದ ಆಸ್ಪತ್ರೆಗಳನ್ನು ತೆರೆಯುವ ಬಗ್ಗೆ.

591: (4130)

ಶ್ರೀ ಮಹಾಂತೇಶ ಎಸ್.ಕೌಜಲಗಿ (ಬೈಲಹೊಂಗಲ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೈಲಹೊಂಗಲ ತಾಲ್ಲೂಕಿನ ಚಿವಟಗುಂಡಿ, ಅವಟೂರ ಹಾಗೂ ಸವದತ್ತಿ ತಾಲ್ಲೂಕಿನ ಕುಟರನಟ್ಟಿ ಗ್ರಾಮಗಳಲ್ಲಿ ಆಯುರ್ವೇದ ಆಸ್ಪತ್ರೆ ತೆರೆಯುವ ಬಗ್ಗೆ ಸರ್ಕಾರಕ್ಕೆ ಮನವಿಗಳು ಬಂದಿದೆಯೇ?

ಆ) ಬಂದಿದ್ದಲ್ಲಿ ಆರ್ಯುವೇದ ಆಸ್ಪತ್ರೆ ಪ್ರಾರಂಭಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಚವಟಗುಂಡಿ ಗ್ರಾಮದಲ್ಲಿ ಆಯುರ್ವೇದ ಆಸ್ಪತ್ರೆ ತೆರೆಯಲು ಮನವಿಗಳು ಬಂದಿವೆ. ಅಮಟೂರ ಗ್ರಾಮ ಹಾಗೂ ಸವದತ್ತಿ ತಾಲ್ಲೂಕಿನ ಕುಟರನಟ್ಟಿ ಗ್ರಾಮಗಳಲ್ಲಿ ಆಯುರ್ವೇದ ಆಸ್ಪತ್ರೆಗಳನ್ನು ತೆರೆಯಲು ಮನವಿಗಳು ಬಂದಿರುವುದಿಲ್ಲ.

ಆ) ಸರ್ಕಾರಿ ಆಯುರ್ವೇದ ಚಿಕಿತ್ಸಾಲಯಗಳನ್ನು ತೆರೆಯಲು ಬೆಳಗಾಂ ಜಿಲ್ಲಾ ಪಂಚಾಯತ್‌ನ ಯೋಜನೆಯಡಿ ಒದಗಿಸಲಾಗಿರುವ ಆಯವ್ಯಯವನ್ನು ಅವಲಂಬಿಸಿ ಮಂಜೂರಾತಿಗೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಮಹಾಂತೇಶ.ಎಸ್.ಕೌಜಲಗಿ: ಸನ್ಮಾನ್ಯ ಉಪಾಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗೆ ಉತ್ತರವಾಗಿ ಚಿವಟಗುಂಡಿ ಗ್ರಾಮದಲ್ಲಿ ಆಯುರ್ವೇದ ಆಸ್ಪತ್ರೆ ತೆರೆಯಲು ಮನವಿಗಳು ಬಂದಿವೆಯೆಂದು ಸಚಿವರು ಹೇಳಿದ್ದಾರೆ. ಆದರೆ, ಸರ್ಕಾರಿ ಆಯುರ್ವೇದ ಚಿಕಿತ್ಸಾಲಯಗಳನ್ನು ತೆರೆಯಲು ಬೆಳಗಾಂ ಜಿಲ್ಲಾ ಪಂಚಾಯತ್‌ನ ಯೋಜನೆಯಡಿ ಒದಗಿಸಲಾಗಿರುವ ಆಯವ್ಯಯವನ್ನು ಅವಲಂಬಿಸಿ ಮಂಜೂರಾತಿಗೆ ಕ್ರಮ

ಕೈಗೊಳ್ಳಲಾಗುವುದೆಂದು ಬಹಳಷ್ಟು ಸಲ ತಿಳಿಸಿದ್ದರೂ ಮಂಜೂರಾತಿಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದುದರಿಂದ, ಸಂಬಂದಿಸಿದವರಿಗೆ ಇಲ್ಲಿಂದ ನಿರ್ದೇಶನ ನೀಡಿ ಆಯುರ್ವೇದ ಆಸ್ಪತ್ರೆ ಮಂಜೂರಾಗುವ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ: ಹೆಚ್.ಸಿ.ಮಹದೇವಪ್ಪ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಾಸಕರನ್ನು ನಾನು ಸರ್ಕಾರದ ಪರವಾಗಿ ಅಭಿನಂದಿಸಲಿಚ್ಚಿಸುತ್ತೇನೆ. ಕಾರಣವೇನೆಂದರೆ, ಭಾರತೀಯ ವೈದ್ಯ ಪದ್ಧತಿಗಳನ್ನು ವೃದ್ಧಿಪಡಿಸುವ ದಿಸೆಯಲ್ಲಿ ಪೂರಕವಾಗಿರುವ ಪ್ರಶ್ನೆ ಕೇಳಿದ್ದಾರೆ. ಒಂದು ಆಯುರ್ವೇದ ಆಸ್ಪತ್ರೆ ಪ್ರಾರಂಭಿಸಲು ಜಿಲ್ಲಾ ಪಂಚಾಯತ್‌ನೊಂದಿಗೆ ಮಾತನಾಡಿ ಹೆಚ್ಚೆಚ್ಚು ಆಯುರ್ವೇದ ಆಸ್ಪತ್ರೆಗಳನ್ನು ತೆರೆಯಲು ಹಿರಿಯ ಸಚಿವರಾದ ಎಂ.ಪಿ.ಪ್ರಕಾಶ್‌ರವರನ್ನು ಕೇಳಿದ್ದೇನೆ. ಆದರೂ ಜಿಲ್ಲಾ ಪಂಚಾಯತ್ ವತಿಯಿಂದ ಹೆಚ್ಚು ಆಯುರ್ವೇದ ಆಸ್ಪತ್ರೆಗಳನ್ನು ಪ್ರಾರಂಭಿಸುವುದಕ್ಕೆ ನಾವು ಕ್ರಮ ಕೈಗೊಳ್ಳಬೇಕಾಗುತ್ತದೆ. ಈ ದಿಸೆಯಲ್ಲಿ ಬೆಳಗಾಂನ ಜಿಲ್ಲಾ ಪಂಚಾಯತ್‌ನೊಂದಿಗೆ ಮಾತನಾಡಿ ಆಯುರ್ವೇದ ಆಸ್ಪತ್ರೆಗಳ ಮಂಜೂರಾತಿಗೆ ಅಗತ್ಯವಾದ ಎಲ್ಲಾ ದಾಖಲಾತಿಗಳನ್ನು ಆದಷ್ಟು ಬೇಗ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ರಾಜಶೇಖರ ಏ ಶೀವಂತ: ನನ್ನ ಕ್ಷೇತ್ರದ ವ್ಯಾಪ್ತಿಗೆ ಬರುವ ಹಳ್ಳೂರು ಗ್ರಾಮದಲ್ಲಿ ಸಹ ಆಯುರ್ವೇದ ಆಸ್ಪತ್ರೆ ಪ್ರಾರಂಭಿಸಲು ಮಂಜೂರಾತಿ ವಿಷಯದಲ್ಲಿ ಆ ಕೆಲಸವಾಗಿದೆಯೆಂದು ಕಳೆದ ವರ್ಷ ತಿಳಿಸಿದ್ದರೂ ಇಲ್ಲಿಯವರೆವಿಗೂ ಆಗಿಲ್ಲ. ಆದುದರಿಂದ, ಆಯುರ್ವೇದ ಆಸ್ಪತ್ರೆಯನ್ನು ಮಂಜೂರು ಮಾಡಿಕೊಡಲಾಗುತ್ತದೆಯೇ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಡಾ: ಹೆಚ್.ಸಿ.ಮಹದೇವಪ್ಪ: ಪ್ರಸ್ತಾವನೆ ಬಂದಲ್ಲಿ ಜಿಲ್ಲಾ ಪಂಚಾಯತ್‌ನ ಆರೋಗ್ಯ ಬಾಬ್ತಿನಲ್ಲಿ ಆಯುರ್ವೇದ ಆಸ್ಪತ್ರೆ ಪ್ರಾರಂಭಿಸಲು ಪ್ರಯತ್ನಿಸುತ್ತೇನೆ.

ಉಪಾಧ್ಯಕ್ಷರು: ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಇಟನಾಳು ಗ್ರಾಮದಲ್ಲಿ ಆಯುರ್ವೇದ ಆಸ್ಪತ್ರೆಯನ್ನು ಮಂಜೂರು ಮಾಡಿ ತದ ನಂತರ ಅದನ್ನು ಬೇರೆಡೆಗೆ ಅಂದರೆ ಹಾಸನ ಜಿಲ್ಲೆಗೆ ಸ್ಥಳಾಂತರಿಸಲಾಗಿದೆ. ಅದೇ ರೀತಿ ಮಂಜೂರಾಗಿದ್ದ ಮತ್ತೊಂದು ಆಯುರ್ವೇದ ಆಸ್ಪತ್ರೆಯನ್ನು ಶಾಸಕರಾಗಿರುವ ಪ್ರಕಾಶ್ ಹುಕ್ಕೇರಿಯವರ ಕ್ಷೇತ್ರವಾದ ಸದಲಗಾಕ್ಕೆ ಸ್ಥಳಾಂತರವಾಗಿದೆ. ಒಂದು ಕಡೆ ಮಂಜೂರಾಗಿರುವ ಆಯುರ್ವೇದ ಆಸ್ಪತ್ರೆಯನ್ನು ಮತ್ತೊಂದೆಡೆ ಸ್ಥಳಾಂತರಿಸಿದರೆ ಜನರಿಗೆ ನಾವು ಯಾವ ರೀತಿ ಉತ್ತರ ಹೇಳಬೇಕು? ಅಲ್ಲದೆ, ಮಂಜೂರಾಗಿರುವ ಆದೇಶವನ್ನು ಸಹ ತೋರಿಸಿದ್ದೇವೆ.

ಡಾ: ಹೆಚ್.ಸಿ.ಮಹದೇವಪ್ಪ: ಇದರ ಬಗ್ಗೆ ಪರಿಶೀಲಿಸುತ್ತೇನೆ. ಅಗತ್ಯವಿದ್ದಲ್ಲಿ ತಮ್ಮ

ಕ್ಷೇತ್ರಕ್ಕೂ ಒಂದು ಆಯುರ್ವೇದ ಆಸ್ಪತ್ರೆಯನ್ನು ಮಂಜೂರು ಮಾಡಿಕೊಡುತ್ತೇನೆ.

ಉಪಾಧ್ಯಕ್ಷರು: ಮಂಜೂರು ಮಾಡಿಕೊಡುತ್ತೇವೆಂದಲ್ಲ. ಒಂದೆಡೆ ಮಂಜೂರಾಗಿರುವ ಆಯುರ್ವೇದ ಆಸ್ಪತ್ರೆಯನ್ನು ಕಸಿದುಕೊಂಡು ಬೇರೆಡೆಗೆ ಸ್ಥಳಾಂತರಿಸುವುದೇಕೆ?

ಡಾ: ಹೆಚ್.ಸಿ.ಮಹದೇವಪ್ಪ: ಯಾವ ಹಿನ್ನೆಲೆಯಲ್ಲಿ ಆ ರೀತಿ ಬೇರೆಡೆಗೆ ಆಯುರ್ವೇದ ಆಸ್ಪತ್ರೆ ಸ್ಥಳಾಂತರಗೊಂಡ ಬಗ್ಗೆ ನನ್ನ ಗಮನಕ್ಕೆ ಬಂದಿಲ್ಲದಿರುವುದರಿಂದ, ಆ ಕುರಿತು ಪರಿಶೀಲಿಸಿ ಸರಿಪಡಿಸುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ. ಜಿಲ್ಲಾ ಪಂಚಾಯತ್‌ನಿಂದ ಎಷ್ಟು ಆಯುರ್ವೇದ ಆಸ್ಪತ್ರೆಗಳನ್ನು ಕೊಡುವುದಕ್ಕೆ ಸಾಧ್ಯವಿದೆಯೋ ಅಷ್ಟನ್ನೂ ಕೊಡುವುದಕ್ಕೆ ಪ್ರಯತ್ನಿಸುತ್ತೇನೆ.

ಉಡುಪಿ ಜಿಲ್ಲೆಯಲ್ಲಿ ವಿಶ್ವಬ್ಯಾಂಕು ಕುಡಿಯುವ ನೀರಿನ ಯೋಜನೆ.

592: (4108)

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ವಿಶ್ವಬ್ಯಾಂಕು ಕುಡಿಯುವ ನೀರಿನ ಯೋಜನೆ ಅಡಿಯಲ್ಲಿ ಮಂಜೂರಾಗಿ ಟೆಂಡರ್ ಕರೆಯಲಾದ ಯೋಜನೆಗಳೆಷ್ಟು,(ತಾಲ್ಲೂಕುವಾರು, ಗ್ರಾಮವಾರು, ಹೆಸರು ತಿಳಿಸುವುದು)

ಆ) ಟೆಂಡರಾಗಿ ಕೆಲಸ ಪೂರ್ಣಗೊಳ್ಳದೆ ಇರುವ ಯೋಜನೆಗಳೆಷ್ಟು (ತಾಲ್ಲೂಕುವಾರು, ಗ್ರಾಮವಾರು ಹೆಸರು ತಿಳಿಸುವುದು)

ಇ) ಟೆಂಡರಾಗಿ ಕಾಮಗಾರಿ ಪ್ರಾರಂಭವಾಗಿರುವ ಯೋಜನೆಗಳೆಷ್ಟು (ತಾಲ್ಲೂಕುವಾರು, ಗ್ರಾಮವಾರು ಹೆಸರು ತಿಳಿಸುವುದು)

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ಅ. ಮಾದರಿ ಗ್ರಾಮ - 1
ಆ. ಮೊದಲ ಹಂತದ ಗ್ರಾಮಗಳು - 18
ಇ. 2ನೇ ಹಂತದ ಗ್ರಾಮಗಳು - 15

ಒಟ್ಟು - 24